





# ‘ಸಂಗೀತ ಕಲಾನಿಧಿ’

ಕರ್ನಾಟಕ ಶಾಸ್ತ್ರೀಯ ಸಂಗೀತದ ಅಪೂರ್ವ ಗಾಯಕ ಚೆನ್ನೈಯ ವಿದ್ವಾನ್ ಸಂಜಯ್ ಸುಬ್ರಹ್ಮಣ್ಯನ್ ಅವರಿಗೆ ಈ ಸಲದ ಪ್ರತಿಷ್ಠಿತ ‘ಸಂಗೀತ ಕಲಾನಿಧಿ’ ಪ್ರಶಸ್ತಿಯ ಗರಿ.

■ ಉಮಾ ಅನಂತ್

ಕರ್ನಾಟಕ ಸಂಗೀತದ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದು ‘ಸಂಗೀತ ಕಲಾನಿಧಿ’. ಮದ್ರಾಸ್ ಮ್ಯೂಸಿಕ್ ಅಕಾಡೆಮಿ ನೀಡುವ ಈ ಪ್ರಶಸ್ತಿ ಕರ್ನಾಟಕ ಸಂಗೀತದಲ್ಲಿ ರಾಷ್ಟ್ರಮಟ್ಟದ ಅತ್ಯುನ್ನತ ಸಾಧಕರಿಗೆ ಜೀವ ಮಾನದ ಸಾಧನೆಗಾಗಿ ನೀಡುವ ಪ್ರಶಸ್ತಿ ಇದು. ಈ ಸಲದ ಪ್ರಶಸ್ತಿಗೆ ದೇಶದ ಅಪೂರ್ವ ಸಾಧಕ ಚೆನ್ನೈಯ ವಿದ್ವಾನ್ ಸಂಜೀವ ಸುಬ್ರಹ್ಮಣ್ಯನ್ ಭಾಜನರಾಗಿದ್ದಾರೆ.

ಆಕಾಶವಾಣಿಯ ಎ ಗ್ರೇಡ್ ಕಲಾವಿದರಾದ ಸಂಜೀವ್ ಸುಬ್ರಹ್ಮಣ್ಯನ್ ಅವರು ಸಂಗೀತ ಪ್ರಿಯರಿಗೆ ಅದರಲ್ಲೂ ಕರ್ನಾಟಕದ ಕೇಳುಗರಿಗೆ ಸದಾ ನೆನಪಿನಲ್ಲಿ ಉಳಿಯುವ ಕಛೇರಿಗಳನ್ನೇ ನೀಡಿದ್ದಾರೆ. ಈ ಮಾತಿಗೊಂದು ತಾಜಾ ಉದಾಹರಣೆ ಇಲ್ಲಿದೆ. ಅದು 2008ನೇ ಇಸವಿ. ಬೆಂಗಳೂರು ಗಾಯನ ಸಮಾಜದಲ್ಲಿ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರ ಜನ್ಮ ಶತಮಾನೋತ್ಸವ ಸಂಗೀತ ಉತ್ಸವ. ಸಂಜೀವ್ ಸುಬ್ರಹ್ಮಣ್ಯನ್ ಅವರ ಸಂಗೀತ ಕಛೇರಿ. ಶೆಮ್ಮಂಗುಡಿ ಅವರಿಗೆ ಅತ್ಯಂತ ಪ್ರಿಯವಾದ ರಾಗಗಳು ಮತ್ತು ಕೃತಿಗಳನ್ನು ಈ ಕಲಾವಿದರು ಪಟ್ಟಿ ಮಾಡಿಕೊಂಡು ಬಂದು ಅದನ್ನೇ ಪ್ರಸ್ತುತಪಡಿಸಿದ್ದರು. ಸುರುಟಿ ರಾಗದ ವರ್ಣದೊಂದಿಗೆ ಕಛೇರಿಗೆ ನಾಂದಿ ಹಾಡಿ, ಮುಂದೆ ಸೌರಾಷ್ಟ್ರ, ಕಮಾಚ್, ಪೂರ್ವಿ ಕಲ್ಯಾಣಿ, ರಾಗಮಾಲಿಕೆಗಳನ್ನು ಹಾಡಿ ಕಛೇರಿ ಸಂಪನ್ನಗೊಳಿಸಿದ್ದರು. ಅಂದಿನ ಅವರ ಮಾಧುರ್ಯಭರಿತ ಗಾಯನ ಇಂದಿಗೂ ಕೇಳುಗರ ನೆನಪಿನಂಗಳದಲ್ಲಿದೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕೋಟೆ ಹೈಸ್ಕೂಲ್ ಮೈದಾನದಲ್ಲಿ ರಾಮನವಮಿ ಸಂದರ್ಭದಲ್ಲಿ ನಡೆಸುವ ಸಂಗೀತೋತ್ಸವ ಕೂಡ ಸಂಗೀತ ಕ್ಷೇತ್ರದಲ್ಲಿ ಪ್ರಮುಖ ಹೆಜ್ಜೆಗುರುತು. ತಿಂಗಳ ಕಾಲ ನಡೆಯುವ ಈ ಸಂಗೀತೋತ್ಸವದಲ್ಲಿ 2012ರಲ್ಲಿ ಸಂಜಯ್ ಸುಬ್ರಹ್ಮಣ್ಯನ್ ಅವರ ಗಾಯನ ಕಛೇರಿ ಇತ್ತು. ಇದೂ ಕೂಡ ದಾಖಲೆಯ ಭಾಷ್ಯ ಬರೆಯಿತು. ವರ್ಷಕ್ಕೆ ಒಮ್ಮೆಯೋ, ಎರಡು ಬಾರಿಯೋ ಬೆಂಗಳೂರಿಗರಿಗೆ ತಮ್ಮ ಅನನ್ಯ ಗಾನ ಸವಿಯನ್ನು ಉಣಿಸುವ ಈ ಕಲಾವಿದ ಕರ್ನಾಟಕ ಶಾಸ್ತ್ರೀಯ ಸಂಗೀತದ ಒಬ್ಬ ಅಪ್ರತಿಮ ಸಾಧಕ.

ಸಂಜಯ್ ಸುಬ್ರಹ್ಮಣ್ಯನ್ ಅವರು ತಮ್ಮ ಎಳನೆ ವಯಸ್ಸಿಗೆ ಚೆನ್ನೈಯಲ್ಲಿ ವಿದ್ವಾನ್ ವಿ. ಲಕ್ಷ್ಮೀನಾರಾಯಣನ್ ಬಳಿ ಸಂಗೀತ ಕಲಿಯಲಾರಂಭಿಸಿದರು. ಆರಂಭಿಕ ಪಾಠದ ನಂತರ ವಿದುಷಿ ರುಕ್ಮಿಣಿ ರಾಜಗೋಪಾಲನ್, ಕೋಲ್ಕತ್ತ ಕೆ.ಎಸ್. ಕೃಷ್ಣಮೂರ್ತಿ ಅವರ ಬಳಿ ಸತತ 18 ವರ್ಷಗಳ ಕಾಲ ಅಭ್ಯಾಸ ಮಾಡಿದರು. ಬಳಿಕ ನಾದಸ್ವರ ವಿದ್ವಾನ್ ವೈದ್ಯನಾಥನ್ ಅವರ ಬಳಿಯೂ ಸಂಗೀತ ಕಲಿತರು. ಇದರ ಜತೆಗೆ ಪಂ. ಕೃಷ್ಣಾನಂದ್ ಅವರ ಬಳಿ ಕೆಲ ವರ್ಷ ಹಿಂದೂಸ್ತಾನಿ ಸಂಗೀತವನ್ನೂ ಕಲಿತವರು. ಸದ್ಯ ಸಂಜಯ್ ಗಾಯಕರಾಗಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಛೇರಿ ಮಟ್ಟಕ್ಕೆ ಬಂದ ಹಲವು ಶಿಷ್ಯ ಬಳಗವನ್ನೂ ಹೊಂದಿದ್ದಾರೆ. ಚಿತ್ರ ನಿರ್ದೇಶಕ ಪ್ರಸನ್ನ ರಾಮಸ್ವಾಮಿ ಎಂಬವರ ಸಾಕ್ಷ್ಯಚಿತ್ರವೊಂದಕ್ಕೆ ಸಂಗೀತ ನೀಡಿದ್ದು ಇದು ತಮಿಳುನಾಡಿನಲ್ಲಿ ಬಹಳಷ್ಟು ಖ್ಯಾತಿ ಗಳಿಸಿದೆ.

### ಗಾಯನ ವೈಶಿಷ್ಟ್ಯ

ಇವರ ಸಂಗೀತ ಕಛೇರಿಯ ವೈಶಿಷ್ಟ್ಯ ಎಂದರೆ ಕೃತಿಗಳ, ರಾಗಗಳ, ವರ್ಣ, ಕೀರ್ತನೆ, ತಿಲ್ಲಾನ, ರಾಗಮಾಲಿಕೆಗಳ ಆಯ್ಕೆಯಲ್ಲಿ ವೈವಿಧ್ಯತೆ. ಒಂದು ಕಛೇರಿಗೆ ಹಾಡಿದ್ದನ್ನು ಇನ್ನೊಂದು ಕಛೇರಿಯಲ್ಲಿ ಹಾಡದೇ ಹೊಸತನವನ್ನು ಯಾವಾಗಲೂ ಕಾಪಾಡಿಕೊಂಡು ಬರುವುದು. ಹೀಗಾಗಿ ಇವರ ಯಾವುದೇ ಸಂಗೀತ ಕಛೇರಿಯಲ್ಲಿ ಏಕತಾನತೆ ಇರುವುದಿಲ್ಲ. ಸಂಗೀತದಲ್ಲಿ ಭಾವನಾತ್ಮಕತೆ, ಮಧುರವಾದ ಆಲಾಪನೆ, ತಂತ್ರಗಾರಿಕೆ, ಉತ್ತಮ ಮನೋಧರ್ಮ, ತಡವರಿಕೆ ಇಲ್ಲದ ನಿರ್ರ್ಗಳ ಸ್ವರ ಪ್ರಸ್ತಾರ, ಶುದ್ಧ ಸಾಹಿತ್ಯ, ಮಂದ್ರ, ಮಧ್ಯ ಮತ್ತು ತಾರ.. ಹೀಗೆ ಮೂರೂ ಸ್ಥಾಯಿಗಳಲ್ಲಿ ಲೀಲಾಜಾಲ ಹಾಡುಗಾರಿಕೆ, ಲಯದಲ್ಲಿ ನೈಪುಣ್ಯ ಮೇಲಾಗಿ ಅದ್ಭುತ ಉಸಿರು ನಿಯಂತ್ರಣ ಸಾಮರ್ಥ್ಯ ಇವರ ಗಾಯನ ವೈಶಿಷ್ಟ್ಯ.

ಸಂಗೀತದಲ್ಲಿ ಈ ಎಲ್ಲ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಳ್ಳಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ಸಂಜಯ್ ಅವರದು ಒಂದೇ ಉತ್ತರ... ‘ಸತತ ಪರಿಶ್ರಮ, ನಿರಂತರ ಅಭ್ಯಾಸ..’

ಹೌದು, ದಿನಕ್ಕೆ ಸತತ ಆರು ಗಂಟೆಗಳ ನಿರಂತರ ರಿಯಾಜ್ ಸಂಜಯ್ ಸಾಧನೆಯ ಶಿಖರಕ್ಕೇರಲು ಕಾರಣವಾಯಿತು. ಜತೆಗೆ ಹಿರಿಯ ಕಲಾವಿದರ ಸಂಗೀತ ಕೇಳಿ ಅವರ ಗಾಯನದಲ್ಲಿರುವ ವಿಶೇಷಗಳನ್ನು ರೂಢಿಸಿಕೊಂಡಿರುವುದು. ಹೀಗೆ ಕಳೆದ 30 ವರ್ಷಗಳಿಂದ ನೂರಾರು ವೇದಿಕೆಗಳಲ್ಲಿ ಕಛೇರಿ ನೀಡುತ್ತಾ ಬಂದಿರುವ ಈ ಗಾಯಕರ ‘ಸಂಗೀತ ಶಿಸ್ತು’ ಆದರ್ಶಪ್ರಾಯ.

ಸಂಜಯ್ ಸಂಗೀತಕ್ಕೆ ಸದಾ ನಾಗೈ ಮುರಳೀಧರನ್ ಅವರ ವಯೊಲಿನ್ ಪಕ್ಕವಾದ್ಯ, ನೈವೇಲಿ ವೆಂಕಟೇಶ್ ಅವರ ಮೃದಂಗ ಸಹಕಾರ. ಇವರಿಬ್ಬರೂ ಸಂಜಯ್ ಗಾಯನ ಸೊಬಗನ್ನು ವರ್ಣಿಸುವುದು ಹೀಗೆ..‘ಸಂಜಯ್ ಅವರ ಸಂಗೀತದಲ್ಲಿ ಪರಿಪೂರ್ಣತೆ ಇದೆ, ತಾಳದಲ್ಲಿ ಸ್ಪಷ್ಟತೆ ಇದೆ, ಇಂತಹ ಸಂಗೀತಗಾರನಿಗೆ ಸಾಥಿ ನೀಡುವುದು ನಮಗೆ ಹೆಮ್ಮೆ ಎನಿಸಿದೆ’. ಒಬ್ಬ ಕಲಾವಿದ ಪಕ್ಕವಾದ್ಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರನ್ನೂ ಅನುಸರಿಸಿಕೊಂಡು ಹಾಡುವುದು ಬಹಳ ಮುಖ್ಯ. ಇದಕ್ಕೂ ಕಲೆಗಾರಿಕೆ ಬೇಕು. ಅಂತಹ ಕಲೆಗಾರಿಕೆ ಸಂಜಯ್ ಅವರಿಗೆ ಒಲಿದಿದೆ.

ಮಧುರೆ ಟಿ.ಎನ್. ಶೇಷಗೋಪಾಲನ್ ಅವರ ಸಂಗೀತವನ್ನು ಬಹಳ ಇಷ್ಟಪಡುವ ಸಂಜಯ್, ‘ಸಂಗೀತದಲ್ಲಿ ಆಲಾಪನೆ ಮೂಲಕವೇ ಕೇಳುಗರನ್ನು ಸೆಳೆಯುವುದು ಬಹುದೊಡ್ಡ ಸವಾಲು’ ಎನ್ನುತ್ತಾರೆ.

ಅರಿಯಾಕುಡಿ ರಾಮಾನುಜ ಅಯ್ಯರ್, ಮಹಾರಾಜಪುರಂ ವಿಶ್ವನಾಥ ಅಯ್ಯರ್, ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ಆರ್.ಕೆ. ಶ್ರೀಕಂಠನ್, ಎಂ.ಎಸ್. ಗೋಪಾಲಕೃಷ್ಣನ್, ಎಂ.ಎಲ್. ವಸಂತಕುಮಾರಿ, ಸುಧಾ ರಘುನಾಥನ್ ಮುಂತಾದ ಮಹಾನ್ ಸಂಗೀತ ಕಲಾವಿದರಿಗೆ ಸಂದಿದ್ದ ಈ ಅಪರೂಪದ ಗೌರವ ಇದೀಗ ಸಂಜಯ್ ಸುಬ್ರಹ್ಮಣ್ಯನ್ ಮುಡಿಲಲ್ಲಿದೆ. ■